**ದಿಃ 3-08-2023 ರಂದು ಸಲ್ಲಿಸಿದ ಮಧ್ಯಂತರ ಅರ್ಜಿ**

**ಮೇಲೆ ಆದೇಶ**

1. ಅರ್ಜಿದಾರರು/ಪ್ರತಿವಾದಿಯರು ಪ್ರಸ್ತುತ ಅರ್ಜಿ ಸಲ್ಲಿಸಿ ದಾವೆಯನ್ನು ನಿರ್ಧರಿಸುವಲ್ಲಿ ಅವಶ್ಯವಿರುವ ಮುಖ್ಯ ದಾಖಲೆಗಳನ್ನು ಹಾಜರುಪಡಿಸಲು ಅನುಮತಿ ಕೇಳಿ ಅದರೊಂದಿಗೆ ದಾಖಲಾತಿಗಳನ್ನು ಯಾದಿಯೊಂದಿಗೆ ನೀಡಿರುತ್ತಾರೆ.

2. ಸದರಿ ಅರ್ಜಿಗೆ ವಾದಿ ಪರ ತಕರಾರು ಸಲ್ಲಿಸಿ, ಹಾಜರುಪಡಿಸಿದ ದಾಖಲೆಗಳು ಅಪೂರ್ಣ, ಸೃಷ್ಟಿಸಿದ ಹಾಗೂ ಪ್ರತಿವಾದಿಯರು ತಮ್ಮ ಅನುಕೂಲಕ್ಕೆ ತಕ್ಕಂತೆ ತಿದ್ದುಪಡಿ ಮಾಡಿಕೊಂಡಿರುವ ದಾಖಲೆಗಳಾಗಿರುವುದರಿಂದ ಅವುಗಳನ್ನು ಈ ಹಂತದಲ್ಲಿ ಹಾಜರುಪಡಿಸಲು ಅವಕಾಶವಿರುವುದಿಲ್ಲ ಎಂದು ಹಾಗೂ ಇತರ ಸಂಗತಿಗಳನ್ನು ತಮ್ಮ ತಕರಾರನ್ನು ತಿಳಿಸಿ ಅರ್ಜಿ ವಜಾಮಾಡಲು ತಿಳಿಸಿರುತ್ತಾರೆ.

3. ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ...........

**ಅಂಶಗಳು**

1. ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು ಪ್ರತಿವಾದಿಯರು ಅರ್ಹರಿರುತ್ತಾರೆಯೇ?

2. ಯಾವ ಆದೇಶ ?

4. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ:

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

## ಕಾರಣಗಳು

5. **ಅಂಶ ನಂ.1**:- ದಾವೆಯನ್ನು ಪಾಲುವಾಟ್ನಿ ಹಾಗೂ ಹಕ್ಕು ಠರಾಯಿಸುವ ಕುರಿತು ಸಲ್ಲಿಸಿರುತ್ತಾರೆ. ಸದರಿ ದಾವೆಯನ್ನು ಡಿಡಬ್ಲ್ಯೂ-1 ರವರ ಮುಂದುವರೆದ ಸಾಕ್ಷಿಗಾಗಿ ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಿರುತ್ತಾರೆ. ದಾವೆಯಲ್ಲಿ ಪಕ್ಷಗಾರರು ತಾವು ಅವಲಂಬಿಸಿರುವ ದಾಖಲೆಗಳನ್ನು ವಾದ-ಪ್ರತಿವಾದಪತ್ರ ಸಲ್ಲಿಸುವ ಸಮಯದಲ್ಲಿ ನೀಡಬೇಕೆಂದು ದಿವಾಣಿ ಪ್ರಕ್ರಿಯಾ ಸಂಹಿತೆಯಲ್ಲಿ ಸ್ಪಷ್ಟಪಡಿಸಿರುತ್ತದೆ. ಒಂದು ವೇಳೆ ತದನಂತರದಲ್ಲಿ ದಾಖಲೆಗಳನ್ನು ಹಾಜರುಪಡಿಸಲು ಇಚ್ಛಿಸಿದರೆ ಅನುಮತಿ ಮೇರೆಗೆ ಅಲ್ಲದೆ ಸಲ್ಲಿಸಿದ ದಾಖಲೆಗಳನ್ನು ಸಾಕ್ಷಿ ಎಂದು ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ಸ್ಪಷ್ಟಪಡಿಸುತ್ತದೆ.

6. ಪ್ರಸ್ತುತ ದಾವೆಯಲ್ಲಿ ಪ್ರತಿವಾದಿಯರ ಪರ ಹಾಜರುಪಡಿಸಲು ಇಚ್ಛಿಸಿದ ದಾಖಲೆಗಳನ್ನು ಸಲ್ಲಿಸಲು ಅನುಮತಿ ಕೋರಿ ಪ್ರಸ್ತುತ ಮಧ್ಯಂತರ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಗೆ ವಾದಿ ಪರ ಸಲ್ಲಿಸಿದ ತಕರಾರಿನಲ್ಲಿ ತಿಳಿಸಿದ ಸಂಗತಿಗಳ

ಕುರಿತಾಗಿ ಡಿಡಬ್ಲ್ಯೂ -1 ರವರ ಪಾಟೀಸವಾಲಿನಲ್ಲಿ ಪರಿಹಾರ ಕಂಡುಕೊಳ್ಳಲು ವಾದಿಗೆ ಅವಕಾಶವಿರುತ್ತದೆ. ಕಾರಣ ಕೇವಲ ತಡವಾಗಿ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎಂಬುವ ಮಾತ್ರಕ್ಕೆ ಅವುಗಳನ್ನು ಕಡತದ ಮೇಲೆ ಪಡೆದುಕೊಳ್ಳಲು ಬರಲಾರದು ಎನ್ನಲಾಗದು. ಕಾರಣ ಅರ್ಜಿಯನ್ನು ಖರ್ಚು ಸಹಿತ ಪುರಸ್ಕರಿಸುವುದರಿಂದ ವಾದಿಯ ಹಿತವನ್ನು ಸಹ ಕಾಯ್ದುಂತಾಗುತ್ತದೆ. ಆದ್ದರಿಂದ ಅಂಶ ನಂ. 1 ಕ್ಕೆ " **ಸಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

7. **<u>ಅಂಶ ನಂ. 2</u>**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**<u>ಆದೇಶ</u>**

ದಿಃ 3-8-2023 ರಂದು ಪ್ರತಿವಾದಿ ಪರ ಹಾಜರುಪಡಿಸಿದ ಮಧ್ಯಂತರ ಅರ್ಜಿಯನ್ನು ರೂ. 200/- ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.

ಡಿಡಬ್ಲ್ಯೂ-1 ರವರ ಮುಂದುವರೆದ ಸಾಕ್ಷಿಗಾಗಿ ಪ್ರಕರಣವನ್ನು ನಂತರ ಕರೆಯಿರಿ.

Sd/

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**